# S.S.C. EXAMINATIONS-FIRST LANGUAGE [KANNADA]

## BLUE PRINT FOR MODEL PAPER 2025-26

**SUBJECT : KANNADA** **MAX. MARKS : 100** **TIME : 3 Hrs. 15 Mins.**

**[FIRST LANGUAGE] 01 K & 02 K**

### I. ವಿದ್ಯಾ ಪ್ರಮಾಣಗಳು – ಭಾರತ್ವ ಪಟ್ಟಿಕೆ

| ಕ್ರಮ ಸಂಖ್ಯೆ | ವಿದ್ಯಾ ಪ್ರಮಾಣಗಳು | ಅಂಕಗಳು | ಶೇಕಡಾ |
|---|---|---|---|
| 1. | ಅವಗಾಹನೆ – ಪ್ರತಿಸ್ಪಂದನ | 24 | 24% |
| 2. | ವ್ಯಕ್ತೀಕರಣ – ಸೃಜನಾತ್ಮಕತೆ | 44 | 44% |
| 3. | ಭಾಷಾಂಶಗಳು | 32 | 32% |
| | ಮೊತ್ತ.. | 100 | 100% |

### II. ಪಾಠ್ಯ ಭಾರತ್ವ ಪಟ್ಟಿಕೆ / ವಿಷಯ ರೂಪ ಭಾರತ್ವ ಪಟ್ಟಿಕೆ

| ಕ್ರಮ ಸಂಖ್ಯೆ | ಪಾಠ್ಯಾಂಶಗಳು / ವಿಷಯ | ಅಂಕಗಳು | ಶೇಕಡಾ |
|---|---|---|---|
| 1. | ಪದ್ಯ ಭಾಗ | 20 | 20% |
| 2. | ಗದ್ಯ ಭಾಗ | 20 | 20% |
| 3. | ಪಠ್ಯ ಪೂರಕ ಅಧ್ಯಯನ [Non detail] | 20 | 20% |
| 4. | ಪದ್ಯ / ಗದ್ಯದಿಂದ ಸೃಜನಾತ್ಮಕ ಪ್ರಶ್ನೆ | 08 | 8% |
| 5. | ಭಾಷಾಂಶಗಳು | 32 | 32% |
| | ಮೊತ್ತ.. | 100 | 100% |

### ಪ್ರಶ್ನಾನುರೂಪ ಭಾರತ್ವ ಪಟ್ಟಿಕೆ

| ಕ್ರಮ ಸಂಖ್ಯೆ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳ ಸಂಖ್ಯೆ | ಅಂಕಗಳು | ಮೊತ್ತ ಅಂಕಗಳು | ಶೇಕಡಾ |
|---|---|---|---|---|---|
| 1. | ವ್ಯಾಸರೂಪ ಪ್ರಶ್ನೆಗಳು | 07 | 08 | 56 | 56% |
| 2. | ಲಘು ಪ್ರಶ್ನೆಗಳು | 03 | 04 | 12 | 12% |
| 3. | ಅತಿ ಲಘು ಪ್ರಶ್ನೆಗಳು | 09 | 02 | 18 | 18% |
| 4. | ಲಕ್ಷ್ಯಾತ್ಮಕ ಪ್ರಶ್ನೆಗಳು | 14 | 01 | 14 | 14% |
| | ಮೊತ್ತ.. | 33 | | 100 | 100% |

# 2025-2026

## ಪ್ರಶ್ನಾನುರೂಪ ವಿಶ್ಲೇಷಣೆ ಪಟ್ಟಿಕೆ – ಕನ್ನಡ ಪ್ರಥಮ ಭಾಷೆ

| ಕ್ರಮ ಸಂಖ್ಯೆ | ವಿದ್ಯಾ ಪ್ರಮಾಣಗಳು | ಪ್ರ.ಸಂ. | ಪ್ರಶ್ನೆಗಳ ರೂಪ | ಅಂಕಗಳು | | ಪ್ರಶ್ನೆಗಳ ಸ್ವಭಾವ |
|---|---|---|---|---|---|---|
| 1. | ಅವಗಾಹನೆ- ಪ್ರತಿಸ್ಪಂದನೆ | 1 | ಪರಿಚಿತ ಪದ್ಯ ಪ್ರಶ್ನೆಗಳು | 8 | ವ್ಯಾಸರೂಪ | ಪದ್ಯ ಪಾಠಗಳಲ್ಲಿ ಸಣ್ಣ ಪದ್ಯಗಳು ಬಾವಗೀತೆ, ಕಂದ, ಷಟ್ಪದಿ ಉತ್ತರಗಳು ಪೂರ್ತಿ ವಾಕ್ಯ ರೂಪದಲ್ಲಿರಬೇಕು. |
| | | 2 | ಪರಿಚಿತ ಗದ್ಯ ಪ್ರಶ್ನೆಗಳು | 8 | ವ್ಯಾಸರೂಪ | ಗದ್ಯ ಪಾಠದಲ್ಲಿ ಮುಖ್ಯವಾದ ಪ್ಯಾರಾಗಳು, ಉತ್ತರಗಳು ಪೂರ್ಣ ವಾಕ್ಯದಲ್ಲಿರಬೇಕು. |
| | | 3 | ಪದ್ಯ ಪೂರಕ ಸಂಘಟನಾ ಕ್ರಮ | 8 | ವ್ಯಾಸರೂಪ | ಸಂಘಟನಾ (ಸರಿಯಾದ) ಕ್ರಮದಲ್ಲಿ ಬರೆಯುವುದು. |
| | **ಸೂಚನೆ :** ಗದ್ಯ, ಪದ್ಯ ಪಾಠಗಳು ಪ್ರಾಧಾನ್ಯತೆ ಸಮಾನವಿರಬೇಕೆಂಬ ಲಕ್ಷ್ಯದಿಂದ ಅಪರಿಚಿತ ಗದ್ಯವನ್ನು ತೆಗೆದು 'ವ್ಯಕ್ತೀಕರಣ – ಸೃಜನಾತ್ಮಕತೆ' ಯಲ್ಲಿ ಗದ್ಯ ಭಾಗದಿಂದ ವ್ಯಾಸ ರೂಪ ಪ್ರಶ್ನೆ ಕೊಡಲಾಗಿದೆ. | | | | | |
| 2. | ವ್ಯಕ್ತೀಕರಣ ಸೃಜನಾತ್ಮಕತೆ | 4 | ಕವಿ ಪರಿಚಯ | 4 | ಲಘುರೂಪ | ಪದ್ಯ ಭಾಗದಿಂದ ಮಾತ್ರ ಕೊಡಬೇಕು. |
| | | 5 | ಗದ್ಯಭಾಗ | 4 | ಲಘುರೂಪ | ಗದ್ಯ ಭಾಗದಿಂದ ಮಾತ್ರ ಕೊಡಬೇಕು. |
| | | 6 | ಪದ್ಯಪೂರಕ | 4 | ಲಘುರೂಪ | ಪದ್ಯ ಪೂರಕದಿಂದ ಮಾತ್ರ ಕೊಡಬೇಕು. |
| | | 7 | ವಿಷಯಾತ್ಮಕ | 8 | ವ್ಯಾಸರೂಪ | ಪದ್ಯ ಭಾಗದಿಂದ ಮಾತ್ರ |
| | | 8 | ವಿಷಯಾತ್ಮಕ | 8 | ವ್ಯಾಸರೂಪ | ಗದ್ಯ ಭಾಗದಿಂದ ಮಾತ್ರ |
| | | 9 | ವಿಷಯಾತ್ಮಕ | 8 | ವ್ಯಾಸರೂಪ | ಪದ್ಯಪೂರಕದಿಂದ ಮಾತ್ರ |
| | | 10 | ಸೃಜನಾತ್ಮಕ ಪ್ರಶ್ನೆ | 8 | ವ್ಯಾಸರೂಪ | ಪದ್ಯದಿಂದ ಒಂದು, ಗದ್ಯ ಭಾಗದಿಂದ ಒಂದು ಉದಾಹರಣೆ : ಪತ್ರ, ಸಂಭಾಷಣೆ, ಕರಪತ್ರ, ಗಾದೆ ಮಾತು ಇತ್ಯಾದಿ. |

..2

| ಕ್ರಮ ಸಂಖ್ಯೆ | ವಿದ್ಯಾ ಪ್ರಮಾಣಗಳು | ಪ್ರ.ಸಂ. | ಪ್ರಶ್ನೆಗಳ ರೂಪ | ಅಂಕಗಳು | | ಪ್ರಶ್ನೆಗಳ ಸ್ವಭಾವ |
|---|---|---|---|---|---|---|
| ೩. | ಭಾಷಾಂಶಗಳು | 11 | ಅಲಂಕಾರ ಗುರ್ತಿಸಿ ಲಕ್ಷಣ | 2 | ಅತಿ ಲಘು ರೂಪ | ಪಾಠ್ಯ ಭಾಗದಿಂದ ಕೊಡಬೇಕು. |
| | | 12 | ಪದ್ಯ ಪಾದಕ್ಕೆ ಗುರು ಲಘು ಗುರ್ತಿಸಿ ಗಣ ವಿಭಜನೆ, ಹೆಸರು. | 2 | ಅತಿ ಲಘು ರೂಪ | ಪದ್ಯ ಭಾಗದಿಂದ ಕೊಡಬೆಕು. |
| | | 13 | (ಅ) ಅರ್ಥ ಬರೆಯುವುದು<br>(ಆ)ಗುರ್ತಿಸುವುದು | 2 | ಅತಿ ಲಘು ರೂಪ | ಪಾಠದಲ್ಲಿನ ಅರ್ಥಗಳು ಕೊಡುವುದು |
| | | 14 | (ಅ)ಸಮಾನಾರ್ಥಕ ಬರೆಯುವುದು<br>(ಆ)ಗುರ್ತಿಸುವುದು | 2 | ಅತಿ ಲಘು ರೂಪ | ಪಾಠದಲ್ಲಿನ ಸಮಾನಾರ್ಥಕ ಕೊಡುವುದು |
| | | 15 | (ಅ) ತತ್ಸಮ ಬರೆಯುವುದು<br>(ಆ) ತದ್ಭವ ಗುರ್ತಿಸುವುದು | 2 | ಅತಿ ಲಘು ರೂಪ | ತತ್ಸಮ, ತದ್ಭವ ಕೊಡುವುದು |
| | | 16 | (ಅ)ನಾನಾರ್ಥಗಳು ಬರೆಯುವುದು<br>(ಆ)ನಾನಾರ್ಥಗಳು ಗುರ್ತಿಸುವುದು | 2 | ಅತಿ ಲಘು ರೂಪ | ನಾನಾರ್ಥ ಕೊಡುವುದು, ಗುರ್ತಿಸುವುದು. |
| | | 17 | (ಅ) ದ್ವಿರುಕ್ತಿ ಬರೆಯುವುದು<br>(ಆ) ಜೋಡು ನುಡಿ ಗುರ್ತಿಸುವುದು | 2 | ಅತಿ ಲಘು ರೂಪ | ಪಾಠ್ಯ ಪುಸ್ತಕದಲ್ಲಿ ಬರುವ ಕುರುಕ್ತಿ ಜೋಡು ನುಡಿಗಳು ಕೊಡುವುದು. |
| | | 18. | ನುಡಿಗಟ್ಟುಗಳು ಗುರ್ತಿಸಿ | 2 | ಅತಿ ಲಘು ರೂಪ | ನುಡಿಗಟ್ಟು ಗುರ್ತಿಸುವುದು |
| | | 19. | ನುಡಿಗಟ್ಟುಗಳ ಸಂದರ್ಭ | 2 | ಅತಿ ಲಘು ರೂಪ | ನುಡಿಗಟ್ಟು ಗಳು ಸಂದರ್ಭ. |

| ಕ್ರಮ ಸಂಖ್ಯೆ | ವಿದ್ಯಾ ಪ್ರಮಾಣಗಳು | ಪ್ರ.ಸಂ. | ಪ್ರಶ್ನೆಗಳ ರೂಪ | ಅಂಕಗಳು | | ಪ್ರಶ್ನೆಗಳ ಸ್ವಭಾವ |
|---|---|---|---|---|---|---|
| | | 20 | ಸಂಧಿ ಬಿಡಿಸಿ | 1 | ಲಕ್ಷ್ಯಾತ್ಮಕ | ಪಾಠದಲ್ಲಿನ ಸಂಧಿ ಪದಗಳು. |
| | | 21 | ಕೂಡಿಸಿ ಬರೆ | 1 | ಲಕ್ಷ್ಯಾತ್ಮಕ | ಪುಸ್ತಕದ ಕೊನೆಯಲ್ಲಿರುವ ಸಂಧಿಗಳು. |
| | | 22 | ಸಂಧಿ ಗುರ್ತಿಸಿ | 1 | ಲಕ್ಷ್ಯಾತ್ಮಕ | ಪುಸ್ತಕದ ಕೊನೆಯಲ್ಲಿರುವ ಸಂಧಿಗಳು. |
| | | 23 | ಸಮಾಸ ವಿಗ್ರಹ ವಾಕ್ಯ ಬರೆಯುವುದು | 1 | ಲಕ್ಷ್ಯಾತ್ಮಕ | ಪುಸ್ತಕದ ಕೊನೆಯಲ್ಲಿರುವ ಸಮಾಸಗಳು. |
| | | 24. | ಸಮಾಸ ಗುರ್ತಿಸಿ | 1 | ಲಕ್ಷ್ಯಾತ್ಮಕ | ಪುಸ್ತಕದ ಕೊನೆಯಲ್ಲಿರುವ ಸಮಾಸಗಳು. |
| | | 25. | ಹೊಸಗನ್ನಡ ರೂಪ | 1 | ಲಕ್ಷ್ಯಾತ್ಮಕ | ಪಠ್ಯ ಪುಸ್ತಕದಲ್ಲಿನ ಪದ್ಯ ಭಾಗದಿಂದ ಆಯ್ದ ವಾಕ್ಯಗಳು. |
| | | 26. | ವಿರುದ್ಧಾರ್ಥಕ ವಾಕ್ಯ ಬರೆಯುವುದು | 1 | ಲಕ್ಷ್ಯಾತ್ಮಕ | ಪುಸ್ತಕದ ವಾಕ್ಯಗಳು. |
| | | 27. | ನಿಷೇದಾರ್ಥಕ ಕ್ರಿಯಾಪದ ಗುರ್ತಿಸುವುದು | 1 | ಲಕ್ಷ್ಯಾತ್ಮಕ | ಪಠ್ಯ ಪುಸ್ತಕದಲ್ಲಿನ ಕ್ರಿಯಾ ಪದಗಳು. |
| | | 28. | ವಾಕ್ಯಗಳು | 1 | ಲಕ್ಷ್ಯಾತ್ಮಕ | ಯಾವ ಪಾಠದಿಂದಾಗಲಿ ಕೊಡಬಹುದು. |
| | | 29. | ಕರ್ಮಣಿ ವಾಕ್ಯ ಗುರ್ತಿಸಿ. | 1 | ಲಕ್ಷ್ಯಾತ್ಮಕ | ಕರ್ಮಣಿ ವಾಕ್ಯ ಗುರ್ತಿಸಿ. |
| | | 30 | ಗ್ರಾಂಧಿಕ ರೂಪ | 1 | ಲಕ್ಷ್ಯಾತ್ಮಕ | ಗ್ರಾಂಥಿಕ ರೂಪ ಬರೆಯುವುದು. |
| | | 31 | ವಾಕ್ಯದ ಪ್ರಕಾರಗಳು | 1 | ಲಕ್ಷ್ಯಾತ್ಮಕ | ವಾಕ್ಯ ಬರೆಯುವುದು. |

| ಕ್ರಮ ಸಂಖ್ಯೆ | ವಿದ್ಯಾ ಪ್ರಮಾಣಗಳು | ಪ್ರ.ಸಂ. | ಪ್ರಶ್ನೆಗಳ ರೂಪ | ಅಂಕಗಳು | | ಪ್ರಶ್ನೆಗಳ ಸ್ವಭಾವ |
|---|---|---|---|---|---|---|
| | | ೩೨ | ವಾಕ್ಯ ಗುರ್ತಿಸಿ | 1 | ಲಕ್ಷ್ಯಾತ್ಮಕ | ಪಾಠದಲ್ಲಿನ ಇಲ್ಲವೇ ಸ್ವಂತವಾಗಲಿ ಕೊಡಬಹುದು. |
| | | ೩೩ | ಎಂತಹ ವಾಕ್ಯ ಬರೆಯುವುದು | 1 | ಲಕ್ಷ್ಯಾತ್ಮಕ | ಪಾಠದಲ್ಲಿನ ಇಲ್ಲವೇ ಸ್ವಂತವಾಗಲಿ ಕೊಡಬಹುದು. |

01K & 02K

FIRST LANGUAGE : S.S.C. PUBLIC EXAMINATIONS .. 2025-26

ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ : 1 .. 2025-26

Time : 3 hours .. 15 minutes. Max. marks : 100.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

1. ಪ್ರಶ್ನೆ ಪತ್ರಿಕೆಯಲ್ಲಿ ಮೂರು ವಿಭಾಗಗಳು ಇರುತ್ತವೆ.
2. ಪ್ರಶ್ನೆ ಪತ್ರಿಕೆ ಓದುವುದಕ್ಕೆ 15 ನಿಮಿಷಗಳು. ಉತ್ತರ ಬರೆಯುವುದಕ್ಕೆ 3-00 ಗಂಟೆಗಳ ಸಮಯ ಕೊಡಲಾಗಿದೆ.
3. ಎಲ್ಲಾ ಪ್ರಶ್ನೆಗಳ ಉತ್ತರಗಳು ಉತ್ತರ ಪತ್ರಿಕೆಯಲ್ಲೇ ಬರೆಯಬೇಕು.

4.ಉತ್ತರಗಳು ದುಂಡಾಗಿ, ಸ್ಪಷ್ಟವಾಗಿ ಬರೆಯಬೇಕು.

**ವಿಭಾಗ .. 1.**

**ಅವಗಾಹನೆ – ಪ್ರತಿಸ್ಪಂಧನೆ. :** 24 ಅಂಕಗಳು

1. ಈ ಕೆಳಗಿನ ಪರಿಚಿತ ಪದ್ಯಗಳಲ್ಲಿ ಒಂದನ್ನು ಓದಿ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 8 ಅಂಕಗಳು

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೋಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

ಜಿ.ಎಸ್. ಶಿವರುದ್ರಪ್ಪ.

ಪ್ರಶ್ನೆಗಳು :

1) ಸುತ್ತಲು ಏನು ಕವಿದಿದೆ ?
2) ಎಂಥಹ ಹಣತೆಯನ್ನು ಹಚ್ಚಬೇಕು?
3) ಯಾವುದನ್ನು ಎಚ್ಚರದಲ್ಲಿ ಮುನ್ನೆಡಸ ಬೇಕು?
4) ಈ ಮೇಲಿನ ಪದ್ಯ ಬರೆದವರು ಯಾರು ?

ಅಥವಾ :

ಕರಿನರೆ ಬಣ್ಣದ ಪುಚ್ಚಗಳುಂಟು

ಬಿಳಿ–ಹೊಳೆ ಬಣ್ಣದ ಗರಿ – ಗರಿಯುಂಟು

ಕೆನ್ನನ ಹೊನ್ನನ ಬಣ್ಣ – ಬಣ್ಣಗಳ

ರೆಕ್ಕೆಗಳೆರಡು ಪಕ್ಕದಲುಂಟು

ಹಕ್ಕಿ ಹಾರುತಿದಿ ನೋಡಿದಿರಾ ?

ದ. ರಾ. ಬೇಂದ್ರೆ

ಪ್ರಶ್ನೆಗಳು :

ಉ) ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?
ಊ) ಕರಿನರೆ ಬಣ್ಣದಲ್ಲಿ ಏನು ಇವೆ?
ಋ ) ಹಕ್ಕಿಯ ಪಕ್ಕದಲ್ಲಿ ಏನಿವೆ ?
ೠ) ಈ ಪದ್ಯದಿಂದ ಒಂದು ಪ್ರಶ್ನೆ ತಯಾರಿಸಿ ?

೨. ಕೆಳಗಿನ ಪರಿಚಿತ ಗದ್ಯವನ್ನು ಓದಿ, ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿ. ೮ ಅಂಕಗಳು

ಲೇಖಕರು ಒಂದುಬಾರಿ ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣ ಕಟ್ಟಿ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ತಮ್ಮ ಹಳ್ಳಿ ತಲುಪಲು ಮದಲಿಂಗನ ಕಣಿವೆದಾಟಿ ಹೋಗಬೇಕು. ಕಾಡುದಾರಿ ಬೇಗ ಬೇಗ ನಡೆದರು. ಕಣಿವೆಗೆ ಬರುವ ವೇಳೆಗೆ ರಾತ್ರಿಯಾಗಿತ್ತು. ಹಸಿವಿನ ಜೊತೆಗ್ಗೆ ಭಯವೂ ಸೇರಿ ಕಾಲು ಚುರುಕಾಯಿತು. ರಸ್ತೆಗೆ ಸ್ವಲ್ಪ ದೂರದಲ್ಲಿದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು. ಆಗತಾನೇ ಎದ್ದ ಹುಲಿ ಶ್ಯಾನುಭೋಗರನ್ನು ಕಂಡಿತು. ಅವರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಶಾನುಭೋಗರ ಕೈಯಲ್ಲಿ ಖಿರ್ದಿ ಪುಸ್ತಕವಿತ್ತು. ಅದು ಅವರ ಬ್ರಹ್ಮಾಸ್ತ್ರ ಶಾನುಭೋಗರು ಹುಲಿಯನ್ನು ನೋಡಿ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ತಲೆಸುತ್ತಿತು.

ಪ್ರಶ್ನೆಗಳು :

ಅ) ಲೇಬಕರು ಚಿಕ್ಕನಾಯಕನ ಹಳ್ಳಿಗೆ ಏಕೆ ಹೋಗಿದ್ದರು ?

ಆ) ಹುಲಿಗೆ ಪರಮಾನಂದವಾಗಲು ಕಾರಣವೇನು ?

ಇ) ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

ಈ) ಗದ್ಯದ ಆಧಾರವಾಗಿ ಒಂದು ಪ್ರಶ್ನೆ ತಯಾರಿಸಿ ?

3. ಕೆಳಗಿನ ವ್ಯಾಖ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ . 8 ಅಂಶಗಳು

(ಅ) 1957 ರಲ್ಲಿ ಬೀದರ್ ನಲ್ಲಿ ಜನಿಸಿದರು.

(ಆ) ಡಾ॥ ವಿಜಯಶ್ರೀ ಶಬರದ ಬಂಡಾಯ ಸಾಹಿತ್ಯದ ಬಹು ಮುಖ್ಯ ಕವಿಯಿತ್ರಿ.

(ಎ) ರತ್ನಮ್ಮ ಹೆಗ್ಗಡೆ ಬಹುಮಾನ, ಅತ್ತಿಮಬ್ಬೆ ಪ್ರಶಸ್ತಿ ದೊರೆತವು.

(ಈ) ಉರಿಲಿಂಗ, ಹೂವಿನ ತೇರನೇರಿ, ಜ್ವಲಂತ, ಮುಗಿಲ ಮಲ್ಲಿಗೆ ಕೃತಿಗಳು ಬರೆದಿದ್ದಾಳೆ.

## <u>ವಿಭಾಗ –2</u>

ವ್ಯಕ್ತೀಕರಣ – ಸೃಜನಾತ್ಮಕತೆ 44 ಅಂಕಗಳು.

ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. 3x4=12 ಅಂಕಗಳು.

4. 'ಹಸುರು' ಪದ್ಯ ಭಾಗದಿಂದ ಕುವೆಂಪು ಇವರ ಪರಿಚಯ ಮಾಡಿರಿ.

5. ಅಶೋಕ ಪೈ ಹೇಳದ ಸಂಶೋಧನಾ ಸತ್ಯವೇನು?

6. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?

ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4x8=32 ಅಂಕಗಳು.

7. ಹಲಗಲಿ ದಂಗೆಯ ಪರಿಣಾಮವೇನು?

ಅಥವಾ

ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?

8. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?

ಅಥವಾ

ಕನ್ನಡ ಭಾಷೆ ಸಮೃದ್ಧವಾಗಿ ರೂಪಗೊಂಡ ಬಗೆ ಹೇಗೆ?

9. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

ಅಥವಾ

ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?

10. ನಿಮ್ಮ ಬೀದಿಗೆ ದಾರಿದೀಪ ಹಾಕಿಸುವಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೊಂದು ಪತ್ರ ಬರೆಯಿರಿ.

ಅಥವಾ

'ತಾಳಿದವನು ಬಾಳಿಯಾನು' ಈ ಗಾದೆಯ ಅರ್ಥವನ್ನು ವಿವರಿಸಿ ಬರೆಯಿರಿ.

## <u>ವಿಭಾಗ –3</u>

<u>ಭಾಷಾಂಶಗಳು</u> 32 ಅಂಕಗಳು.

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರಿಸಿ. 9x2=18 ಅಂಕಗಳು.

11. "ಅಳ್ಳರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನರಿಯದೆ ಪೇಳು ವಿಶ್ವಾಮಿತ್ರ".
(ಈ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆಯಿರಿ) 2 ಅಂಕ

12. ಕೊಟ್ಟಿರುವ ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರು ಬರೆಯಿರಿ. 2 ಅಂಕ

ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ.

13. (ಅ) ಕಾರ ಸಾಹೇಬ ಭಾರತೀಯರ ಮೇಲೆ ನಿಶ್ಯಸ್ತ್ರೀಕರಣದ <u>**ಹುಕುಂ**</u> ಹೊರಡಿಸಿದನು.
(ಗೆರೆ ಎಳೆದ ಪದಕ್ಕೆ ಸರಿಯಾದ ಅರ್ಥ ಬರೆಯಿರಿ).

(ಆ) ಲವನು ಕುದುರೆಯನ್ನು <u>**ಬಾಳೆ**</u> ಗಿಡಕ್ಕೆ ಕಟ್ಟಿದನು. 2 ಅಂಕ
(ಗೆರೆ ಎಳೆದ ಪದದ ಅರ್ಥ ಗುರ್ತಿಸಿ ಬರೆಯಿರಿ).
(ಅ) ಕದಳ (ಆ) ಜಂಬು (ಇ) ನಾರಿಕೇಳ (ಈ) ಕೂಷ್ಮಾಂಡ

14. (ಅ) ಶಬರಿಗೆ ರಾಮನನ್ನು ನೋಡುವ <u>**ಹಂಬಲ**</u>ವಿತ್ತು.
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಬರೆಯಿರಿ). 2 ಅಂಕ

(ಆ) ವಿದ್ಯಾರ್ಥಿಗಳು ಒಳ್ಳೆಯ <u>**ಪಥದಲ್ಲಿ**</u> ನಡೆಯಬೇಕು.
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಗುರ್ತಿಸಿ ಬರೆಯಿರಿ).
(ಅ) ಬಿಲ್ಲೆ, ಪದಕ, (ಆ) ಸ್ಪರ್ಧೆ, ಕಾರ್ಯ (ಇ) ದಾರಿ, ಮಾರ್ಗ (ಈ) ಪಂಥ, ಸಾಲು.

15. (ಅ) ಶಬರಿಗೆ ರಾಮನಲ್ಲಿ <u>**ಬಕುತಿ**</u> ಇತ್ತು.
(ಗೆರೆ ಎಳೆದ ಪದಕ್ಕೆ ತತ್ಸಮ ಬರೆಯಿರಿ).

(ಆ) ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ <u>**ಕೀರ್ತಿ**</u> ಇದೆ. 2 ಅಂಕ
(ಗೆರೆ ಎಳೆದ ಪದಕ್ಕೆ ತದ್ಭವ ಗುರ್ತಿಸಿ ಬರೆಯಿರಿ).
(ಅ) ಗೌರವ (ಆ) ಆರತಿ (ಇ) ಮೂರುತಿ (ಈ) ಕೀರುತಿ.

16. (ಅ) ನಾವು <u>**ಹೊಳೆ**</u>ಯಲ್ಲಿ ಆಗಾಗ್ಗೆ ಸ್ನಾನ ಮಾಡುತ್ತೇವೆ.

(ಗೆರೆ ಎಳೆದ ಪದಕ್ಕೆ ನಾನಾರ್ಥಗಳು ಬರೆಯಿರಿ) 2 ಅಂಕ

(ಆ) ಆಟಗಳಲ್ಲಿ ಚೆನ್ನಾಗಿ ಆಡಿದರೆ ಕಪ್ **ದೊರೆ**ಯುತ್ತದೆ.

(ಗೆರೆ ಎಳೆದ ಪದಕ್ಕೆ ನಾನಾರ್ಥಗಳು ಗುರ್ತಿಸಿ ಬರೆಯಿರಿ)

(ಅ) ಸಿಗುವುದು, ಪಡೆಯುವುದು (ಆ) ಸಿಗುವುದು, ಅರಸ (ಇ) ದೊರೆ, ಮಂತ್ರಿ (ಈ) ಅರಸ,ಅರಸಿ

17. (ಅ) ಮಕ್ಕಳು ಓಡಿಓಡಿ ದಣಿದರು. 2 ಅಂಕ

(ದ್ವಿರುಕ್ತಿ ಗುರ್ತಿಸಿ ಬರೆಯಿರಿ).

(ಆ) ಮನೆಯಲ್ಲಿ **ಮಕ್ಕಳುಮರಿ** ಆಟವಾಡುತ್ತಾರೆ.

(ಗೆರೆ ಎಳೆದ ಪದ ಗುರ್ತಿಸಿ ಬರೆಯಿರಿ).

(ಅ) ಉಕ್ತಿ (ಆ) ದ್ವಿರುಕ್ತಿ (ಇ) ಜೋಡುನುಡಿ (ಈ) ಅವ್ಯಯ.

18. ಗುರುಗಳ ಮಾತು ಕೇಳದಿದ್ದರೆ ವಿದ್ಯಾರ್ಥಿಗಳು ಅಡ್ಡ ಹಾದಿ ಹಿಡಿಯುವರು.

ವಾಕ್ಯದಲ್ಲಿರುವ ನುಡಿಗಳನ್ನು ಗುರ್ತಿಸಿ ಬರೆಯಿರಿ. 2 ಅಂಕ

19. ಕಂಬನಿ – ಈ ನುಡಿಗಟ್ಟನ್ನು ಯಾವ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. 2 ಅಂಕ

ಈ ಕೆಳಗಿನ ಪದಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ. 14x1=14 ಅಂಕಗಳು.

20. ಈ ವರ್ಷ **ಮಳೆಗಾಲ** ತುಂಬಾ ಚೆನ್ನಾಗಿದೆ. 1 ಅಂಕ

(ಗೆರೆ ಎಳೆದ ಪದವನ್ನು ಬಿಡಿಸಿ ಬರೆಯಿರಿ).

21. ಒಮ್ಮೆ + ಒಮ್ಮೆ (ಸಂಧಿ ಪದಗಳನ್ನು ಕೂಡಿಸಿ ಬರೆಯಿರಿ. 1 ಅಂಕ

22. ನಮ್ಮ ಊರಿಗೆ ವಸ್ತು **ಸಂಗ್ರಹಾಲಯ** ಬಂದಿದೆ. 1 ಅಂಕ

(ಗೆರೆ ಎಳೆದ ಪದದ ಸಂಧಿ ಗುರ್ತಿಸಿ ಬರೆಯಿರಿ)

(ಅ) ಗುಣಸಂಧಿ (ಆ) ಸವರ್ಣದೀರ್ಘಸಂಧಿ (ಇ) ಆದೇಶಸಂಧಿ (ಈ) ಲೋಪಸಂಧಿ.

23. **ಇನತನೂಜ** ಧುರ್ಯೋಧನನ ಪರಮಮಿತ್ರ. 1 ಅಂಕ

(ಗೆರೆ ಎಳೆದ ಪದಕ್ಕೆ ವಿಗ್ರಹ ವಾಕ್ಯ ಬರೆಯಿರಿ).

24. 'ಯಜ್ಞಾಶ್ವ **ಪೂದೋಟ**ವನ್ನು ಹೊಕ್ಕಿದೆ. 1 ಅಂಕ

(ಗೆರೆ ಎಳೆದ ಪದ ಯಾವ ಸಮಾಸ ಗುರ್ತಿಸಿ ಬರೆಯಿರಿ).

(ಅ) ತತ್ಪುರಷ ಸಮಾಸ (ಆ) ಕರ್ಮಧಾರಯ ಸಮಾಸ (ಇ) ದ್ವಿಗು ಸಮಾಸ (ಈ) ದ್ವಂದ್ವ ಸಮಾಸ.

25. ಪಾಂಡವರೊಳರಿದು ಛಲಮನೆ ಮೆರೆವಂ 1 ಅಂಕ

ಈ ವಾಕ್ಯಕ್ಕೆ ಹೊಸಗನ್ನಡ ರೂಪ ಗುರ್ತಿಸಿ ಬರೆಯಿರಿ.

(ಅ) ಪಾಂಡವರೊಡನೆ ಕೂಡಿ ಹೋರಾಡುವೆನು.

(ಆ) ಪಾಂಡವರೊಡನೆ ಕಾದಾಡಿ ನನ್ನ ಛಲವನ್ನೇ ಸಾಧಿಸುವೆನು.

(ಇ) ಪಾಂಡವರು ಛಲವನ್ನು ಮೆರೆದರು.

(ಈ) ಪಾಂಡವರೊಡನೆ ಮೈತಿಯ ಛಲವನ್ನು ಸಾಧಿಸುವೆನು.

26. ರಾಮನು ತಂದೆ ತಾಯಿಗಳನ್ನು ಗೌರವಿಸಿದನು. 1 ಅಂಕ

ಈ ವಾಕ್ಯಕ್ಕೆ ವಿರುದ್ಧಾರ್ಥಕ ವಾಕ್ಯ ಬರೆಯಿರಿ.

27. ಕೆಳಗಿನ ಪದಗಳಲ್ಲಿ ನಿಷೇದಾರ್ಥಕ ಕ್ರಿಯಾಪದ ಗುರ್ತಿಸಿ ಬರೆಯಿರಿ. 1 ಅಂಕ

(ಅ) ಓದುವನು (ಆ) ಓದಿದನು (ಇ) ಓದನು (ಈ) ಓದುತ್ತಾನೆ.

28. ರೈತರು ಹೊಲದಲ್ಲಿ ಬೀಜ ಬಿತ್ತುತ್ತಾರೆ. ಮಳೆಸುರಿಯಲಿಲ್ಲ. 1 ಅಂಕ

(ಸಂಯುಕ್ತ ವಾಕ್ಯದಲ್ಲಿ ಬರೆಯಿರಿ).

29. ಲಲಿತ ಹಾಡನ್ನು ಹಾಡಿದಳು. 1 ಅಂಕ

ಈ ವಾಕ್ಯಕ್ಕೆ ಕರ್ಮಣಿವಾಕ್ಯ ಗುರ್ತಿಸಿ ಬರೆಯಿರಿ.

(ಅ) ಲಲಿತ ಹಾಡನ್ನು ಹಾಡಲಿಲ್ಲ.

(ಆ) ಲಲಿತ ಹಾಡು ಚೆನ್ನಾಗಿ ಹಾಡುವಳು.

(ಇ) ಲಲಿತಳಿಂದ ಹಾಡು ಹಾಡಲ್ಪಟ್ಟಿತು.

(ಈ) ಲಲಿತಳಿಗೆ ಹಾಡು ಹಾಡಿಸಿದರು.

೩೦. **<u>'ಇಸವಾಸ'</u>** ಎಂಬುದು ಬಹಳ ಮುಖ್ಯ 1 ಅಂಕ

(ಗೆರೆ ಎಳೆದ ಪದದ ಗ್ರಾಂಥಿಕ ರೂಪ ಬರೆಯಿರಿ).

೩1. ದೇವರು ಅವನಿಗೆ ಒಳ್ಳೆಯದನ್ನು ಮಾಡಲಿ. 1 ಅಂಕ

(ಇದು ಎಂತಹ ವಾಕ್ಯ ಬರೆಯಿರಿ).

೩೨. ಆಹಾ! ಅವನು ಗುರಿ ತಲುಪಿದ! 1 ಅಂಕ

ಎಂತಹ ವಾಕ್ಯ ಗುರ್ತಿಸಿ ಬರೆಯಿರಿ.

(ಅ) ಪ್ರಶ್ನಾರ್ಥಕ (ಆ) ನಿಶ್ಚಯಾರ್ಥ (ಇ) ವಿದ್ಯರ್ಥಕ (ಈ) ನಿಷೇಧಾರ್ಥಕ.

೩೩. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು ಇದು ಎಂತಹ ವಾಕ್ಯ ಬರೆಯಿರಿ. 1 ಅಂಕ